


ಗುರುಗಳು ಬಹಳವೇ ಬೆಂಬಲ ನೀಡುತ್ತಿದ್ದರು.

ಎಲ್ಲರ ಬದುಕಿನಲ್ಲಿಯೂ ಸವಾಲುಗಳು ನಿರಂತರವಾಗಿ ಎದುರಾಗುತ್ತಲೇ ಇರುತ್ತವೆ. ಆದರೆ ಕೆಲವು ಸವಾಲುಗಳು ಮಾತ್ರ ಇಡೀ ಬದುಕಿನ ಗತಿಯನ್ನೇ ಬದಲಾಯಿಸಿಬಿಡುತ್ತವೆ. ಬ್ರಹ್ಮಪುತ್ರ ನದಿಯಲ್ಲಿ ಆಗಾಗ ಉಂಟಾಗುತ್ತಿದ್ದ ಪ್ರವಾಹದ ದೆಸೆಯಿಂದಾಗಿ ನಾನು ವಾಸವಿದ್ದ ಕಮಲಬಾರಿ ಸತ್ರವು ಮುಳುಗಡೆಯಾಗುತ್ತಿತ್ತು. ಮಣ್ಣು ಸವಕಳಿಯಾಗಿ ಸತ್ರದ ಅಸ್ತಿತ್ವ ಕುಸಿಯುವಂತಾಯಿತು. ಇಡೀ ಸತ್ರವನ್ನೇ ಬೇರೆ ಕಡೆಗೆ ವರ್ಗಾಯಿಸಲು ನಿರ್ಧರಿಸಲಾಯಿತು. ಆಗ ಗುರು ರಾಸೇಶ್ವರ್ ಸೈಕಿಯಾ ಬಾರ್ಬಾಯನ್ ಅವರೊಡನೆ ನಾನು ಗುವಾಹಟಿಗೆ ಬಂದೆ. ಸತ್ರದ ಧಾರ್ಮಿಕ ನಿಯಮಗಳು ತುಸು ಉದಾರವಾಗುತ್ತಿದ್ದ ಕಾಲವದು. ಸತ್ರಕ್ಕೆ ಸೇರಿದ ವ್ಯಕ್ತಿಯೊಬ್ಬ ಅಲ್ಲಿಂದ ಹೊರಬರಲು ನಿರ್ಧರಿಸಿದರೆ ಅದಕ್ಕೆ ಅವಕಾಶ ಕಲ್ಪಿಸಲಾಗುತ್ತಿತ್ತು. ಹೀಗಾಗಿ ನಾನು ಸತ್ರದ ಧಾರ್ಮಿಕ ಜವಾಬ್ದಾರಿಗಳಿಂದ ಬಿಡುವು ಪಡೆದು, ಸತ್ರವನ್ನು ತೊರೆದು ಹೊರಟೆ. ಜುನ್‌ಜ್ಯೋತಿ ನನ್ನ ಬಾಳಿನಲ್ಲಿ ಪ್ರವೇಶಿಸಿದಳು. ಹಾಗೆ ಹೊರಟಾಗಲೇ ನನಗೆ ಹೊರಗಿನ ಲೋಕವು ಎಷ್ಟು ವಿಶಾಲವಾಗಿದೆ, ಸುಂದರವಾಗಿದೆ ಮತ್ತು ಎಷ್ಟು ಸವಾಲುಗಳನ್ನು ನಮ್ಮ ಮುಂದೆ ತಂದಿಡುತ್ತದೆ ಎಂದು ಅರಿವಿಗೆ ಬಂದಿದ್ದು. ಸತ್ರಿಯಾ ನೃತ್ಯದ ಸಂದರ್ಭದಲ್ಲಿ ಬಳಸುವ ತಾಳವಾದ್ಯ ಕೋಲ್ ಅನ್ನು ಹೆಗಲಿಗೆ ನೇತು ಹಾಕಿಕೊಂಡು ನಡೆಯುತ್ತಿದ್ದೆ. ದೇಹವು ನೃತ್ಯವನ್ನು ಅರಗಿಸಿಕೊಂಡಿತ್ತು. ಕಂಠವು ಗಾಯನವನ್ನು ತಿಳಿದುಕೊಂಡಿತ್ತು.

ಪ್ರವಾಸ ಮಾಡುತ್ತ, ಸತ್ರಿಯಾ ನೃತ್ಯ ಪ್ರಸ್ತುತಪಡಿಸುತ್ತ, ಅಲ್ಲಲ್ಲಿ ಕಾರ್ಯಕ್ರಮಗಳನ್ನು ನೀಡುತ್ತ, ಲಭ್ಯವಿದ್ದ ತಂಡಗಳಿಗೆ ಸತ್ರಿಯಾ ನೃತ್ಯ ಪಾಠಗಳನ್ನು ಮಾಡುತ್ತ ಜೀವನ ಸಾಗಿಸಿದೆ. ಈ ನೃತ್ಯವು ನನ್ನ ಬದುಕಿಗೆ ಅಸ್ತಿತ್ವವನ್ನು ಕೊಟ್ಟಿತು. ಆರ್ಥಿಕವಾಗಿಯೂ ನನ್ನನ್ನು ಪೊರೆಯಿತು. 1974ರಲ್ಲಿ ದೆಹಲಿಯಲ್ಲಿ ನಾನು ಕೇಂದ್ರ ಸರ್ಕಾರ ನಡೆಸುವ 'ಶಂಕರದೇವ ಸಾಂಸ್ಕೃತಿಕ ಸಂಸ್ಥೆ'ಯಲ್ಲಿ ಶಿಕ್ಷಕನಾಗಿ ಬೋಧಿಸಲು ಆರಂಭಿಸಿದೆ.